Spl.C.(SC/ST) No.488/2024

## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಯಚೂರು

**ದಿನಾಂಕ 17 ನೇ ಜುಲೈ 2026**

ಉಪಸ್ಥಿತರು: ಶ್ರೀಮತಿ ಮಾಲ ಎನ್.ಡಿ.
ಬಿಎಲ್., ಎಲ್‌ಎಲ್.ಎಂ,

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಯಚೂರು.**

**ಸ್ಪೇಷಲ್.ಸಿ.(ಎಸ್‌ಸಿ/ಎಸ್‌ಟಿ) ನಂ.488/2024**

| | |
|---|---|
| ಪಿರ್ಯಾದುದಾರ | ರಾಜ್ಯದ ಪರವಾಗಿ<br>ಗಬ್ಬೂರು ಪೊಲೀಸ್ ಠಾಣೆ ರಾಯಚೂರು<br>ವಿರುದ್ದ |
| ಆರೋಪಿತನ ಹೆಸರು | ಸಿದ್ದಲಿಂಗಪ್ಪಗೌಡ @ ಸಿದ್ದರಾಮರಡ್ಡಿ **(A2)** |
| ತಂದೆಯ ಹೆಸರು | ಮಲ್ಲಿಕಾರ್ಜುನಗೌಡ @ ಮಲ್ಲಿಕಾರ್ಜುನ ಬೀರನಾಳ |
| ವಯಸ್ಸು | 30 ವರ್ಷ |
| ವಿಳಾಸ | ಹಿರೇಬೂದೂರು, ತಾಃ ದೇವದುರ್ಗ\| |

**ಭಾ.ನ್ಯಾ.ಸು.ಸಂ.ಕಲಂ.351 ರಡಿಯಲ್ಲಿ ಆರೋಪಿತನ ಹೇಳಿಕೆ**

**ಪ್ರಶ್ನೆಃ1** ನ್ಯಾಯಾಲಯದ ಮುಂದೆ ವಿಚಾರಣೆಯಾದ ಅಭಿಯೋಜನ ಪರ ಸಾಕ್ಷಿದಾರರ ಸಾಕ್ಷ್ಯದ ಹೇಳಿಕೆಗಳನ್ನು ನೀವು ಕೇಳಿದ್ದೀರಾ?

ಉತ್ತರ : ಹೌದು

**ಪ್ರಶ್ನೆಃ 2:** ಪ್ರಾಸಾ.1 ತಮ್ಮಣ್ಣ ರವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-2 ತನ್ನ ತಂದೆ, ಚಾಸಾ-3 ತನ್ನ ತಮ್ಮ, ಚಾಸಾ-4 ರಿಂದ 7 ತನಗೆ ಗೊತ್ತು, ತಾವು ಹಿಂದೂ ನಾಯಕ ಜಾತಿಗೆ ಸೇರಿದವರು, ಆರೋಪಿತರು ಹಿಂದೂ ಲಿಂಗಾಯತ ಜಾತಿಗೆ ಸೇರಿದವರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ** ನಾವು ಲಿಂಗಾಯತರು,ಪ್ರಾಸಾ.1ರವರ ಜಾತಿ ಗೊತ್ತಿಲ್ಲ.

**ಪ್ರಶ್ನೆಃ 3:** ಪ್ರಾಸಾ.1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಕಳೆದ 8 ವರ್ಷಗಳಿಂದ ಮಲದಕಲ್ ಗ್ರಾಮದಲ್ಲಿನ ನ್ಯಾಯ ಬೆಲೆ ಅಂಗಡಿಯಲ್ಲಿ ಕಂಪ್ಯೂಟರ್

ಆಪರೇಟರ್ ಎಂದು ಕೆಲಸಕ್ಕೆ ಹೋಗುತ್ತಿದ್ದು, ಪಕ್ಕದ ಊರಾದ ಹಿರೇಬೂದೂರು ಗ್ರಾಮದಲ್ಲಿ ನ್ಯಾಯ ಬೆಲೆ ಅಂಗಡಿಯನ್ನು ನಡೆಸುವವರು ಯಾರು ಇಲ್ಲವೆಂದು ಅಲ್ಲಿನ ನ್ಯಾಯ ಬೆಲೆ ಅಂಗಡಿಗೆ ತನ್ನನ್ನು ಜೋಡಿಸಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ 4:** ಪ್ರಾಸಾ.1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಹಿರೇಬೂದೂರು ನ್ಯಾಯ ಬೆಲೆ ಅಂಗಡಿಯು ಚಾಸಾ-7 ರವರ ಮನೆಯಲ್ಲಿ ಇದ್ದು, ಇದರ ಸಂಖ್ಯೆಃ 82 ಇರುತ್ತದೆ, ದಿಃ 25-07-2024 ರಂದು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಸದರಿ ಹಿರೇಬೂದೂರು ಗ್ರಾಮದ ನ್ಯಾಯ ಬೆಲೆಯ ಅಂಗಡಿಯಲ್ಲಿ ತಾನು, ಚಾಸಾ-1 ಮತ್ತು 4 ಗ್ರಾಹಕರ ಬೆರಳು ಮುದ್ರೆಗಳನ್ನು ಪಡೆಯಲು ಇದ್ದೆವು, ಆ ಸಮಯದಲ್ಲಿ ನೆಟ್‌ವರ್ಕ್ ನಿಧಾನವಾಗಿತ್ತೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

ಉತ್ತರಃ **ಸುಳ್ಳು**

**ಪ್ರಶ್ನೆಃ 5:** ಪ್ರಾಸಾ.1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆ ಕಾರಣಕ್ಕೆ ತಾವು ಕಟ್ಟೆಯ ಮೇಲೆ ನೆಟ್‌ವರ್ಕ್ ಸರಿ ಬರಲೆಂದು ಕುಳಿತುಕೊಂಡು ಬೆರಳು ಮುದ್ರೆಗಳನ್ನು ಪಡೆಯತ್ತಿದ್ದಾಗ ಆರೋಪಿತರು ಅಲ್ಲಿಗೆ ಬಂದು ತಾವು ಕಟ್ಟೆಯ ಮೇಲೆ ಏಕೆ ಕುಳಿತ್ತಿದ್ದೆವು ಎಂದು ಪ್ರಶ್ನಿಸಿ ಜಗಳ ಕಾಯ್ದು, ಆರೋಪಿತರು ತಮಗೆ ಬೇಡರ ಸೂಳೆ ಮಕ್ಕಳೆಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, 1 ನೇ ಆರೋಪಿತನು ತನ್ನ ಅಂಗಿ ಹಿಡಿದು ಎಳೆದಾಡಿ ತನ್ನ ಮೈಗೆ ಕೈಯಿಂದ ಹೊಡೆದಿದ್ದು, ತಾನು ಕೆಳಗೆ ಬಿದ್ದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ 6:** ಪ್ರಾಸಾ.1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಚಾಸಾ-2 ರವರು ತನಗೆ ಬಿಡಿಸಿಕೊಳ್ಳಲು ಬಂದಾಗ 1 ನೇ ಆರೋಪಿ ಹಾಗೂ ಲಿಂಗನಗೌಡ ರವರಿಗೂ ಹೊಡೆದಿದ್ದು, ಚಾಸಾ-2 ರವರಿಗೂ ಸಹ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ, ಆರೋಪಿತರು ಪಡಿತರವನ್ನು ಹೇಗೆ ಹಂಚುತ್ತೀರಿ ನೋಡುತ್ತೇವೆಂದು ಹೇಳಿ

ಹಂಚಿಕೆಯನ್ನು ನಿಲ್ಲಿಸಿದ್ದು, ಅದು ಅಲ್ಲದೇ ಆರೋಪಿತರು ಆ ಸಮಯದಲ್ಲಿ ತಮಗೆ ಬೆದರಿಕೆಯನ್ನು ಸಹ ಹಾಕಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ 7**: ಪ್ರಾಸಾ.1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಅಲ್ಲಿಂದ ತಾನು, ಚಾಸಾ-2 ಮತ್ತು 3 ಪೊಲೀಸ್ ಠಾಣೆಗೆ ಹೋಗಿ, ದೂರನ್ನು ನೀಡಿದ್ದು, ಸದರಿ ದೂರನ್ನು ನಿಪಿ-1 ಎಂದು ಮತ್ತು ಅದರ ಮೇಲಿರುವ ತನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಿದ್ದು, ನಂತರ ದಿಃ 26-07-2024 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಒಂದು ಸ್ಥಳ ಪಂಚನಾಮೆಯನ್ನು ಮಾಡಿ ಅದರ ಮೇಲೆ ತನ್ನ ಸಹಿಯನ್ನು ಪಡೆದಿದ್ದು, ಸದರಿ ಸ್ಥಳ ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಅದರ ಮೇಲಿರುವ ತನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 8: ಪ್ರಾಸಾ.1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅದೇ ಸಮಯದಲ್ಲಿ ನಿಪಿ-2 ಕ್ಕೆ ಸಂಬಂಧಿಸಿದಂತೆಯೇ ಪೊಲೀಸರು ಒಂದು ವರ್ಣ ರಂಜಿತ ಛಾಯಾ ಚಿತ್ರವನ್ನು ತೆಗೆಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಿದ್ದು, 1 ನೇ ಆರೋಪಿತನೊಂದಿಗೆ ಗಲಾಟೆಯ ಸಮಯದಲ್ಲಿ ಇದ್ದ ಲಿಂಗನಗೌಡ ನ್ಯಾಯಾಲಯದಲ್ಲಿ ಹಾಜರಿರುವುದಿಲ್ಲ, ಅವರನ್ನು ನೋಡಿದರೇ ತಾನು ಗುರುತಿಸಬಲ್ಲೆನೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ 9**: ಪ್ರಾಸಾ.2 ಬಸವರಾಜ ರವರು ತಮ್ಮ ಸಾಕ್ಷ್ಯದಲ್ಲಿ ತನಗೆ ಚಾಸಾ-1, 2, 3, 5, 6 ಮತ್ತು ಆರೋಪಿತರು ಗೊತ್ತು, 2 ನೇ ಆರೋಪಿತನನ್ನು ನೋಡಿದಲ್ಲಿ ಗುರುತಿಸಬಲ್ಲೆನು, ಚಾಸಾ-1 ಪಡಿತರ ಅಂಗಡಿಯಲ್ಲಿ ಕಂಪ್ಯೂಟರ್ ಮೇಲೆ

ಆಪರೇಟ ಎಂದು ಕೆಲಸ ಮಾಡಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 10: ಪ್ರಾಸಾ.2 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸುಮಾರು 1 ವರ್ಷದ ಹಿಂದೆ ಪಡಿತರ ಗ್ರಾಹಕರ ಬೆರಳು ಮುದ್ರೆಯನ್ನು ಪಡೆಯಲೆಂದು ತಾನು, ಚಾಸಾ-1 ರಿಂದ 3 ಹಿರೇಬೂದೂರು ಗ್ರಾಮಕ್ಕೆ ಹೋಗಿದ್ದೆವು, ಸಮಯ ಬೆಳಿಗ್ಗೆ 10 ಗಂಟೆಯಾಗಿತ್ತು, ಅದೇ ಸಮಯದಲ್ಲಿ ನೆಟ್‌ವರ್ಕ್ ಹೋಗಿದ್ದರಿಂದ ತಾವು ಕಟ್ಟೆ ಮೇಲೆ ಕುಳಿತುಕೊಂಡು ಬೆರಳು ಮುದ್ರೆಗಳನ್ನು ಪಡೆಯಲು ಪ್ರಯತ್ನಿಸುತ್ತಿದ್ದಾಗ ಲಿಂಗನಗೌಡ ರವರ ಮೇಲೆ ಏಕೆ ಬೆರಳು ಮುದ್ರೆಯನ್ನು ಪಡೆಯುತ್ತೀರಿ ಬೇಡರ ಸೂಳೆಮಕ್ಕಳೆಂದು ಅವಾಚ್ಯ ಶಬ್ದಗಳಿಂದ ಬೈದು ನಿಂದನೆ ಮಾಡಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 11: ಪ್ರಾಸಾ.2 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆ ಸಮಯದಲ್ಲಿ ಚಾಸಾ-1 ಮತ್ತು 2 ಇವರಿಗೆ ನ್ಯಾಯಾಲಯದಲ್ಲಿ ಹಾಜರಿರುವ ಲಿಂಗನಗೌಡ ರವರು ಕೈಯಿಂದ ಹೊಡೆದಿದ್ದು, ಅದು ಅಲ್ಲದೇ ತಮಗೆ ಕೊಲೆ ಬೆದರಿಕೆಯನ್ನು ಸಹ ಹಾಕಿದ್ದು, ತಾನು ಮತ್ತು ಚಾಸಾ-3 ಜಗಳವನ್ನು ಬಿಡಿಸಿಕೊಂಡೆವೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 12: ಪ್ರಾಸಾ.3 ಮರೆಣ್ಣ ರವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ತನ್ನ ಮಗ, ತನಗೆ ಚಾಸಾ-3 ರಿಂದ 6 ಗೊತ್ತು, ಚಾಸಾ-7 ಅಂಗಡಿಯ ಮಾಲೀಕ, ತಾವು ಹಿಂದೂ ನಾಯಕ ಜಾತಿಗೆ ಸೇರಿದವರು, ಆರೋಪಿತರು ಹಿಂದೂ ಲಿಂಗಾಯತ

ಸಮುದಾಯಕ್ಕೆ ಸೇರಿದವರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 13: ಪ್ರಾಸಾ.3 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸನ್ 2023 ರಿಂದ ಒಂದು ವರ್ಷ ಕಾಲ ಚಾಸಾ-7 ರವರ ಹೀರೆಬೂದೂರು ಗ್ರಾಮದಲ್ಲಿನ ನ್ಯಾಯ ಬೆಲೆ ಅಂಗಡಿಯನ್ನು ನಡೆಸುತ್ತಿದ್ದು, ಸದರಿ ತಮ್ಮ ನ್ಯಾಯ ಬೆಲೆ ಅಂಗಡಿಯಲ್ಲಿ ಕಂಪ್ಯೂಟರ್ ಆಪರೇಟರ್ ಎಂದು ಕೆಲಸ ಮಾಡುತ್ತಿದ್ದು, ಅದರಂತೆ ಚಾಸಾ-4 ಮತ್ತು 6 ಪಡಿತರ ವಿತರಣೆ ಮಾಡುತ್ತಿದ್ದರು, ದಿಃ 25-07-2024 ರಂದು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಪಡಿತರ ವಿತರಣೆ ಮಾಡಲೆಂದು ತಾನು, ಚಾಸಾ-1, 3, 4, ಮತ್ತು 6 ಹೋಗಿದ್ದೆವೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 14: ಪ್ರಾಸಾ.3 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಪಡಿತರ ಚೀಟಿದಾರರ ಬೆರಳು ಮುದ್ರೆ ಪಡೆಯಲು ಸರ್ವರ್ ಡೌನ್ ಆಗಿತ್ತು, ಆ ಕಾರಣ ತಾವು ಕಟ್ಟೆಯ ಮೇಲೆ ಕುಳಿತು ಬೆರಳು ಮುದ್ರೆಗಳನ್ನು ಪಡೆಯಲು ಪ್ರಯತ್ನಿಸಿದರೂ, ಸಾಧ್ಯವಾಗಿರುವುದಿಲ್ಲ, ಆಗ ತಾವು 1 ನೇ ಆರೋಪಿತನು ತಮಗೆ ಕಟ್ಟೆಯ ಮೇಲೆ ಕುಳಿತುಕೊಂಡಿದ್ದು, ಮತ್ತು ಅವರು ಕೆಳಗೆ ನಿಂತುಕೊಂಡಿದ್ದು, ಬೆರಳು ಮುದ್ರೆ ಪಡೆಯಲು ಎಷ್ಟು ಹೊತ್ತು ತೆಗೆದುಕೊಳ್ಳುತ್ತಿ ಎಂದು ತನಗೆ ಪ್ರಶ್ನಿಸಿ, ಅವಾಚ್ಯ ಶಬ್ದಗಳಿಂದ ಬೇಡರ ಸೂಳೆ ಮಕ್ಕಳೆಂದು ಬೈದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 15: ಪ್ರಾಸಾ.3 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತನ್ನ ಮಗನಾದ ಚಾಸಾ-1 ರವರು ಮಧ್ಯ ಪ್ರವೇಶಿಸಿ 1 ನೇ ಆರೋಪಿತನು ಅವನ ಚಪ್ಪಲಿಂದ ಹೊಡೆದು ಅವಮಾನ ಪಡೆಸಿದ್ದು, 2 ನೇ ಆರೋಪಿತನು ಚಾಸಾ-1 ರವರ ಕೊರಳು ಪಟ್ಟಿ ಹಿಡಿದು ಕೈಯಿಂದ ಆತನ ಮೈಗೆಲ್ಲಾ ಗುದ್ದಿದ್ದು, ಸದರಿ ಅಂಗಡಿಯನ್ನು ಮುಚ್ಚಿಕೊಂಡು ಹೋದರೆ ಉತ್ತಮ ಇಲ್ಲದಿದ್ದರೆ ತಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣದ ಬೆದರಿಕೆಯನ್ನು ಸಹ ಹಾಕಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 16: ಪ್ರಾಸಾ.3 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಜಗಳವನ್ನು ಬಿಡಿಸಲು ತಾನು ಪ್ರಯತ್ನಿಸಿದಾಗ ತನಗೂ ಸಹ ಆರೋಪಿತರು ತನ್ನ ಕೊರಳ ಪಟ್ಟಿ ಹಿಡಿದು ಎಳೆದಾಡಿ ಹೊಡೆದಿದ್ದು, ಚಾಸಾ-3, 4 ಮತ್ತು 6 ಜಗಳವನ್ನು ಬಿಡಿಸಿಕೊಂಡಿದ್ದು, ತಾವು ಸದರಿ ಪಡಿತರ ಅಂಗಡಿಯನ್ನು ಮುಚ್ಚಿ ನೇರವಾಗಿ ಪೊಲೀಸ್ ಠಾಣೆಗೆ ಹೋದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 17: ಪ್ರಾಸಾ.4 ರವಿಕುಮಾರ ರವರು ತಮ್ಮ ಸಾಕ್ಷ್ಯದಲ್ಲಿ ತನಗೆ ಚಾಸಾ-1, 2, 4 ರಿಂದ 6 ಮತ್ತು ಆರೋಪಿತರು ಗೊತ್ತು, ತಾನು ಕಳೆದ 5 ವರ್ಷಗಳಿಂದ ಮಲದಕಲ್ ಗ್ರಾಮದಲ್ಲಿರುವ ಚಾಸಾ-2 ರವರ ನ್ಯಾಯ ಬೆಲೆ ಅಂಗಡಿಯಲ್ಲಿ ಕಂಪ್ಯೂಟರ್ ಆಪರೇಟರ್ ಎಂದು ಕೆಲಸ ಮಾಡುತ್ತಿದ್ದು, ಸದರಿ ಅಂಗಡಿಗೆ ಸಂಬಂಧಿಸಿದಂತೆ ಹೀರೆಬೂದೂರು ಗ್ರಾಮದಲ್ಲಿಯೂ ಸಹ ಅವರದ್ದೆ ನ್ಯಾಯ ಬೆಲೆ ಅಂಗಡಿ ಇರುತ್ತದೆ ಮತ್ತು ಅಲ್ಲಿಯೂ ಸಹ ಕೆಲಸ ಮಾಡುತ್ತಿರುವರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 18: ಪ್ರಾಸಾ.4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿಃ 25-07-2024 ರಂದು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ತಾನು, ಚಾಸಾ-1, 2, 4 ಮತ್ತು 6 ಎಲ್ಲರೂ ಸೇರಿ ಚಾಸಾ-7 ರವರ ಹೀರೆಬೂದೂರು ಕಾಂಪ್ಲೆಕ್ಸ್ ನಲ್ಲಿ ಪಡಿತರ ಅಂಗಡಿಯಲ್ಲಿ ಕೆಲಸ ಮಾಡಲು ಹೋಗಿದ್ದೆವು, ಅದೇ ಸಮಯದಲ್ಲಿ ಗ್ರಾಹಕರ ಬೆರಳು ಮುದ್ರೆ ಪಡೆಯಲು, ನೆಟವರ್ಕ್ ನಿಧಾನವಾಗಿದ್ದರಿಂದ ಪಡೆಯಲು ಸಾಧ್ಯವಾಗಿರುವುದಿಲ್ಲವೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 19: ಪ್ರಾಸಾ.4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಕಟ್ಟೆಯ ಮೇಲೆ ಕುಳಿತುಕೊಂಡು ಬೆರಳು ಮುದ್ರೆ ಪಡೆಯಲು ಎಷ್ಟು ಹೊತ್ತು ಎಂದು ಮತ್ತು ತಮಗೆ ಬಹಳ ಸೊಕ್ಕಾಗಿದೆಂದು ಅವಾಚ್ಯ ಶಬ್ದಗಳಿಂದ ಬೇಡರ ಸೂಳೆಮಕ್ಕಳೇ ಎಂದು ಜಾತಿನಿಂದೆನೆ ಮಾಡಿ ಬೈದಿದ್ದು, 1ನೇ ಆರೋಪಿತನು ಚಾಸಾ-1 ರವರ ಕಪಾಳಕ್ಕೆ ಕೈಯಿಂದ ಹೊಡೆದಿದ್ದು, ಚಾಸಾ-2 ರವರ ಅಂಗಿ ಹಿಡಿದು ಆರೋಪಿತರು ಎಳೆದಾಡಿದ್ದು, ತಾನು ಮತ್ತು ಚಾಸಾ-4 ಮತ್ತು 6 ಜಗಳವನ್ನು ಬಿಡಿಸಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 20: ಪ್ರಾಸಾ.4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆರೋಪಿತರು ಇನ್ನೊಮ್ಮೆ ಹೀರೆಬೂದೂರಿಗೆ ಬಂದರೆ ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣದ ಬೆದರಿಕೆಯನ್ನು ಸಹ ಹಾಕಿದ್ದು, ತಾವು ಎಲ್ಲರೂ ಮರಳಿ ಬಂದಿದ್ದು, ಚಾಸಾ-1 ರವರು ಪೊಲೀಸ್ ಠಾಣೆಗೆ ಹೋದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 21: ಪ್ರಾಸಾ.8 ಪಿ.ಸಿ. ಶಿವರಾಜ ರವರು ತಮ್ಮ ಸಾಕ್ಷ್ಯದಲ್ಲಿ ಗಬ್ಬೂರು ಪೊಲೀಸ್ ಠಾಣೆಯು ಲಿಂಗಸೂಗುರು ಉಪ ವಿಭಾಗದ ವ್ಯಾಪ್ತಿಗೆ ಒಳಪಟ್ಟಿದ್ದು,

ದಿಃ 26-07-2024 ರಂದು, ಚಾಸಾ-14 ಡಿ.ವೈ.ಎಸ್.ಪಿ. ರವರ ಜೊತೆಯಲ್ಲಿ ಈ ಪ್ರಕರಣದ ಪಂಚನಾಮ ಸ್ಥಳಕ್ಕೆ ಭೇಟಿ ನೀಡಿ, ಸದರಿ ಚಾಸಾ-14 ರವರ ಆದೇಶದಂತೆ ತಾನು ಸ್ಥಳದಲ್ಲಿದ್ದು, ತನ್ನ ಆ್ಯಪಲ್ ಕಂಪನಿಯ ಮೊಬೈಲ್ ಪೋನಿನಲ್ಲಿ ಸದರಿ ಸ್ಥಳ ಪಂಚನಾಮೆಯ ಭಾವ ಚಿತ್ರಗಳನ್ನು ನಿಪಿ-3 ರಂತೆ ತೆಗೆದಿದ್ದು ಜೊತೆಗೆ ವಿಡಿಯೋವನ್ನು ಸಹ ಮಾಡಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 22: ಪ್ರಾಸಾ.8 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಚಾಸಾ-14 ರವರೊಂದಿಗೆ ಮಾನ್ಯ ಡಿ.ವೈ.ಎಸ್.ಪಿ. ರವರ ಕಛೇರಿಗೆ ಭೇಟಿ ನೀಡಿ ತನ್ನ ಮೊಬೈಲಿನಲ್ಲಿದ್ದ ಪೋಟೋವನ್ನು ಇಲಾಖಾ ಕಂಪ್ಯೂಟರಿಗೆ ವರ್ಗಾಯಿಸಿಕೊಂಡು ತದನಂತರದಲ್ಲಿ ಸದರಿ ಪೋಟೋವನ್ನು ಸೀಡಿಗೆ ವರ್ಗಾಯಿಸಿಕೊಂಡಿದ್ದು, ಅದೇ ಪೋಟೋನ ಕಲರ್ ಪ್ರಿಂಟ್ ಪಡೆದುಕೊಂಡರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 23: ಪ್ರಾಸಾ.8 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ಪೋಟೋ, ಸೀಡಿ, ಹಾಗೂ ಕಲಂ 65(ಬಿ) ರಡಿಯ ಪ್ರಮಾಣ ಪತ್ರದೊಂದಿಗೆ ಚಾಸಾ-14 ಡಿ.ವೈ.ಎಸ್.ಪಿ. ರವರ ಮುಂದೆ ಹಾಜರುಪಡಿಸಿದ್ದು, ಪ್ರಸ್ತುತ ತಾನು ಸದರಿ ಪೋಟೋವನ್ನು ನಿಪಿ-3 ಎಂದು ಗುರುತಿಸಿದ್ದು, ಮತ್ತು ಪ್ರಸ್ತುತ ತಾನು ಸಲ್ಲಿಸಿರುವ ಭಾರತೀಯ ಸಾಕ್ಷ್ಯಾಧಿನಿಯಮ ಕಲಂ 65(ಬಿ) ರಡಿಯ ಪ್ರಮಾಣ ಪತ್ರವನ್ನು ಮತ್ತು ಸೀಡಿಯನ್ನು ಹಾಜರುಪಡಿಸಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆ: 24:** ಪ್ರಾಸಾ.8 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಈ ಹಂತದಲ್ಲಿ ಆರೋಪಿತರ ವಕೀಲರು ಕಲಂ 65(ಬಿ) ಭಾರತೀಯ ಸಾಕ್ಷ್ಯಾಧಿನಿಯಮದ ಅಡಿಯಲ್ಲಿನ ಪ್ರಮಾಣ ಪತ್ರ ಮತ್ತು ಸೀಡಿಯನ್ನು ಪ್ರಸ್ತುತ ಬಿ.ಎಸ್.ಎ-2023 ಕಾಯಿದೆಯ ಅಡಿಯಲ್ಲಿ ಸಲ್ಲಿಸಿಲ್ಲವೆಂದು ತಕರಾರು ಮಾಡಿದ್ದು, ಸದರಿಯವರ ತಕರಾರಿಗೆ ಒಳಪಡಿಸಿ ಸದರಿ ಪ್ರಮಾಣ ಪತ್ರ ಮತ್ತು ಸೀಡಿಯನ್ನು ಕ್ರಮವಾಗಿ ನಿಪಿ-7 ಮತ್ತು 8 ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರ: ಸುಳ್ಳು**

**ಪ್ರಶ್ನೆ: 25:** ಪ್ರಾಸಾ.9 ಶರಣಪ್ಪ ರವರು ತಮ್ಮ ಸಾಕ್ಷ್ಯದಲ್ಲಿ 2024 ರ ಸಾಲಿನಲ್ಲಿ ಒಂದು ದಿನ ಬೆಳಿಗ್ಗೆ ಸುಮಾರು 10 ಗಂಟೆ ಸಮಯದಲ್ಲಿ, ಚಾಸಾ-7 ರವರ ರೇಷನ್ ಅಂಗಡಿಯ ಹತ್ತಿರ ರೇಷನ್ ಕೊಡುವ ವಿಚಾರವಾಗಿ ಆರೋಪಿತರು ಮತ್ತು ಚಾಸಾ-1 ಮತ್ತು 2 ಇವರ ನಡುವೆ ಜಗಳವಾದ ಪ್ರಯುಕ್ತ ಪೊಲೀಸರು ಅಲ್ಲಿಗೆ ಭೇಟಿ ವಿಚಾರಣೆ ಮಾಡಿ ಒಂದು ಸ್ಥಳ ಪಂಚನಾಮೆಯನ್ನು ಮಾಡಿ ಅದರ ಮೇಲೆ ತನ್ನ ಸಹಿಯನ್ನು ಪಡೆದಿದ್ದು, ಅದೇ ಸಮಯದಲ್ಲಿ ಪೊಲೀಸರು ಒಂದು ವರ್ಣ ರಂಜಿತ ಛಾಯಾ ಚಿತ್ರವನ್ನು ತೆಗೆಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರ: ಸುಳ್ಳು**

**ಪ್ರಶ್ನೆ: 26:** ಪ್ರಾಸಾ.10 ಶಾಹಲಂ (ನಿವೃತ್ತ ಎ.ಎಸ್.ಐ) ರವರು ತಮ್ಮ ಸಾಕ್ಷ್ಯದಲ್ಲಿ ದಿಃ 25-07-2024 ರಂದು, ಸಾಯಂಕಾಲ 6-30 ರ ಸಮಯದಲ್ಲಿ ತಾನು ಠಾಣಾಧಿಕಾರಿಯಾಗಿದ್ದಾಗ ಚಾಸಾ-1 ತಮ್ಮಣ್ಣ ಠಾಣೆಗೆ ಹಾಜರಾಗಿ ಲಿಖಿತ ದೂರೊಂದನ್ನು ನೀಡಿದ್ದು, ಸದರಿ ದೂರನ್ನು ಪರಿಶೀಲಿಸಿ ಠಾಣಾ ಮೊಕದ್ದಮೆ ಸಂಖ್ಯೆ: 99/2024 ರಂತೆ ಈ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ

ಮತ್ತು ತಮ್ಮ ಮೇಲಾಧಿಕಾರಿಗಳಿಗೆ ಪ್ರಥಮ ವರ್ತಮಾನ ವರದಿಯನ್ನು ನಿವೇದಿಸಿಕೊಂಡರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 27: ಪ್ರಾಸಾ.11 ದತ್ತಾತ್ರೇಯ ಡಿ.ವೈ.ಎಸ್.ಪಿ. ಲಿಂಗಸೂಗುರು ರವರು ತಮ್ಮ ಸಾಕ್ಷ್ಯದಲ್ಲಿ ದಿಃ 26-07-2024 ರಂದು, ಅಂದಿನ ರಾಯಚೂರಿನ ಎಸ್.ಪಿ ರವರ ಆದೇಶದ ಮೇರೆಗೆ ಪ್ರಸ್ತುತ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆಂದು ಚಾಸಾ-13 ಎ.ಎಸ್.ಐ. ಶಹಾಲಂ ಗಬ್ಬೂರು ಪೊಲೀಸ್ ಠಾಣೆಯಿಂದ ಇವರಿಂದ ಪಡೆದುಕೊಂಡಿದ್ದು, ಸದರಿ ಆದೇಶದ ಪ್ರತಿಯನ್ನು ನಿಪಿ-10 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಿದರೆಂದು, ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 28: ಪ್ರಾಸಾ.11 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ಸ್ಥಳ ತೋರಿಸಿದಂತೆ, ಸದರಿ ಕೃತ್ಯ ನಡೆದ ಸ್ಥಳವು ಪಂಚರಾದ ಚಾಸಾ-10 ಅನಿಲಕುಮಾರು ಮತ್ತು ಚಾಸಾ-11 ಶರಣಪ್ಪನ್ನವರ ಸಮಕ್ಷಮ ಬೆಳಿಗ್ಗೆ 10 ರಿಂದ 11 ಗಂಟೆಯ ಸಮಯದಲ್ಲಿ ಸ್ಥಳ ಪಂಚನಾಮೆಯನ್ನು ಜರುಗಿಸಿ, ಘಟನಾ ಸ್ಥಳದಲ್ಲಿ ಪೋಟೋವನ್ನು ಸಹ ತೆಗೆಸಿದ್ದು, ಅದನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಿದ್ದು, ಸಾಕ್ಷಿಯು ಸ್ಥಳ ಪಂಚನಾಮೆಯ ಸಮಯದಲ್ಲಿ ತೆಗೆಸಿದ್ದ ಪೋಟೋವನ್ನು ನಿಪಿ-3 ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 29: ಪ್ರಾಸಾ.11 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಮುಂದುವರೆದು ಅದೇ ದಿನ ಚಾಸಾ-1 ರವರ ಮುಂದುವರೆದ ಪುರವಣಿ ಹೇಳಿಕೆಯನ್ನು ಹಾಗೂ ಚಾಸಾ-2 ರಿಂದ 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದು, ದಿಃ 01-08-

2024 ರಂದು, ಚಾಸಾ-8 ಮತ್ತು 9 ರವರ ಹೇಳಿಕೆಗಳನ್ನು ಸಹ ದಾಖಲಿಸಿಕೊಂಡರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ 30**: ಪ್ರಾಸಾ.11 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅದೇ ದಿನ ಚಾಸಾ-9 ರವರಿಂದ ಭಾರತೀಯ ಸಾಕ್ಷ್ಯ ಸಂಹಿತೆ ಕಲಂ 65(ಬಿ) ರ ಪ್ರಮಾಣ ಪತ್ರವನ್ನು ಮತ್ತು ಒಂದು ಸೀಡಿಯನ್ನು ಪಡೆದುಕೊಂಡು ಸದರಿಯವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಸದರಿ ಪ್ರಮಾಣ ಪತ್ರವನ್ನು ಸಾಕ್ಷಿಯು ನಿಪಿ-7 ಎಂದು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನಿಪಿ-7(ಎ) ಎಂದು ಮತ್ತು ಸೀಡಿಯನ್ನು ನಿಪಿ-8 ಎಂದು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 31: ಪ್ರಾಸಾ.11 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿಃ 20-08-2024 ರಂದು ಆರೋಪಿತರು ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ತನ್ನ ಮುಂದೆ ಹಾಜರಾಗಿದ್ದು, ಸದರಿಯವರ ವಿರುದ್ಧ ಕಾನೂನು ಕ್ರಮ ಜರುಗಿಸಿ, ಮುಚ್ಚಳಿಕೆಯನ್ನು ಪಡೆದುಕೊಂಡು ನ್ಯಾಯಾಲಯದ ಜಾಮೀನಿನಿಂದ ಬಿಡುಗಡೆ ಮಾಡಿದ್ದು, ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ಸಾಕ್ಷಿ ಗುರುತಿಸಿದ್ದು, ದಿಃ 27-07-2024 ರಂದು, ಪಿರ್ಯಾದಿ ಮತ್ತು ಆರೋಪಿತರ ಜಾತಿ ಪ್ರಮಾಣ ಪಮಾಣ ಪತ್ರ ಕೊಡುವಂತೆ ಕೋರಿ ದೇವದುರ್ಗ ತಹಶೀಲ್ದಾರವರಿಗೆ ನಿವೇದಿಸಿಕೊಂಡಿರುವರೆಂದು ಮತ್ತು ಜಾತಿ ಪ್ರಮಾಣ ಪತ್ರವನ್ನು ನಿಪಿ-6 ರಂತೆ ಪಡೆದುಕೊಂಡಿದ್ದು, ಅದೇ ದಿನ ತನಿಖೆಯನ್ನು ಪೂರ್ಣಗೊಳಿಸಿ ಸದರಿಯವರ ವಿರುದ್ಧದ ಆರೋಪಗಳ ಮೇಲ್ನೋಟಕ್ಕೆ ತನಿಖೆಯಲ್ಲಿ ಸಾಬೀತಾಗಿದ್ದರಿಂದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದರೆಂದು ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನು ಹೇಳುತ್ತೀರಾ?

**ಉತ್ತರಃ ಸುಳ್ಳು**

**ಪ್ರಶ್ನೆಃ** 32: ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

**ಉತ್ತರಃ** ಇಲ್ಲ

**ಪ್ರಶ್ನೆಃ** 33 : ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿದಾರರ ವಿಚಾರಣೆ ಮಾಡಿಸುತ್ತೀರಾ?

**ಉತ್ತರಃ** ಇಲ್ಲ

(ಈ ದಿನ ದಿನಾಂಕ **17-07-2026** ರಂದು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ವಿವರಿಸಿ ಅವರು ಹೇಳಿದ ಹಾಗೆ ಅವರ ಹೇಳಿಕೆಯನ್ನು ಪಡೆದುಕೊಳ್ಳಲಾಗಿದೆ ಮತ್ತು ಪಡೆದುಕೊಂಡ ಹೇಳಿಕೆ ಸರಿಯಾಗಿದೆಯೆಂದು ಧೃಡೀಕರಿಸಿದ್ದೇನೆ).

**(ಮಾಲ ಎನ್.ಡಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ.**
**ರಾಯಚೂರು.**